# ಮಂಗಳೂರು ವಿಶ್ವವಿದ್ಯಾನಿಲಯ

## ಹೊಸ ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿದ ಮಾರ್ಗಸೂಚಿಗಳು

1. ನಗರ ಪ್ರದೇಶದಲ್ಲಿರುವ ವಿದ್ಯಾಸಂಸ್ಥೆಯಾದರೆ ಸಾಧ್ಯವಾದಷ್ಟು ಮಟ್ಟಿಗೆ ಒಂದು ಎಕರೆ ವಿಸ್ತೀರ್ಣವುಳ್ಳ ಜಮೀನು ಮತ್ತು ನಗರ ಪ್ರದೇಶಕ್ಕಿಂತ ಹೊರ ವಲಯ ಅಥವಾ ಗ್ರಾಮೀಣ ಪ್ರದೇಶದಲ್ಲಿರುವ ವಿದ್ಯಾಸಂಸ್ಥೆಯಾದರೆ ಸಾಧ್ಯವಾದಷ್ಟು ಮಟ್ಟಿಗೆ ಐದು ಎಕರೆ ವಿಸ್ತೀರ್ಣವುಳ್ಳ ಜಮೀನು ವಿದ್ಯಾ ಸಂಸ್ಥೆಯ ಹೆಸರಿನಲ್ಲಿ ಇರತಕ್ಕದ್ದು. ಕಾಲೇಜನ್ನು ಬಾಡಿಗೆ ಕಟ್ಟಡದಲ್ಲಿ ನಡೆಸುವುದಾದಲ್ಲಿ ಐದು ವರ್ಷಗಳ ಬಾಡಿಗೆ ಕರಾರು (lease agreement) ಪತ್ರವನ್ನು ಹೊಂದಿರತಕ್ಕದ್ದು.

2. ಪ್ರಯೋಗಾಲಯ ಆಧಾರಿತ (laboratory oriented) ಮತ್ತು ಅರೆ–ವೃತ್ತಿಪರ (semi professional) ಕೋರ್ಸುಗಳನ್ನು ಪ್ರಾರಂಭಿಸುವುದಾದಲ್ಲಿ ಕನಿಷ್ಠ 25 ಲಕ್ಷ ಮತ್ತು ಪ್ರಯೋಗಾಲಯದ ಅಗತ್ಯತೆ ಇಲ್ಲದ (non laboratory oriented) ಕೋರ್ಸುಗಳನ್ನು ಪ್ರಾರಂಭಿಸುವುದಾದಲ್ಲಿ ಕನಿಷ್ಠ 15 ಲಕ್ಷ ರೂಪಾಯಿಗಳಷ್ಟು ಮೊಬಲಗನ್ನು ಸಂಸ್ಥೆಯ/ಟ್ರಸ್ಟಿನ ಹೆಸರಿನಲ್ಲಿ ನಿರಖು ಠೇವಣಿ ಇಟ್ಟಿರತಕ್ಕದ್ದು.

3. ಬಿ.ಸಿ.ಎ., ಬಿ.ಬಿ.ಎಂ. ಇಂತಹ ವೃತ್ತಿಪರ ಕೋರ್ಸುಗಳನ್ನು ಪ್ರಾರಂಭಿಸುವುದಾದಲ್ಲಿ ಅಂತಹ ಕಾಲೇಜಿನಲ್ಲಿ ತಲಾ ಇಬ್ಬರು ವಿದ್ಯಾರ್ಥಿಗಳಿಗೆ ಒಂದು ಗಣಕ ಯಂತ್ರವಿರುವಂತೆ (2:1) ಗಣಕ ಯಂತ್ರ ಪ್ರಯೋಗಾಲಯವನ್ನು ಸಜ್ಜುಗೊಳಿಸತಕ್ಕದ್ದು.

4. ವಿಶ್ವವಿದ್ಯಾನಿಲಯದ ನಿಯಮಾವಳಿಯಂತೆ ಕಾಲೇಜಿಗೆ ಅರ್ಹ ಪ್ರಾಂಶುಪಾಲರನ್ನು ಮತ್ತು ಪ್ರಾರಂಭಿಸಲಿರುವ ಕೋರ್ಸುಗಳಿಗೆ ಸಂಬಂಧಪಟ್ಟಂತೆ ತಲಾ ಒಬ್ಬ ಪೂರ್ಣಕಾಲಿಕ ಉಪನ್ಯಾಸಕರನ್ನು ಖಾಯಂ ನೆಲೆಯಲ್ಲಿ ನೇಮಕ ಮಾಡತಕ್ಕದ್ದು ಮತ್ತು ಕಾಲೇಜು ಕಚೇರಿಗೆ ತಲಾ ಒಬ್ಬರಂತೆ ಕಚೇರಿ ಅಧೀಕ್ಷಕರು, ಗುಮಾಸ್ತರು ಹಾಗೂ ಇಬ್ಬರು ಜವಾನರನ್ನು ನೇಮಕ ಮಾಡತಕ್ಕದ್ದು.

5. ವಿದ್ಯಾ ಸಂಸ್ಥೆಯಲ್ಲಿ ತರಗತಿ ಕೊಠಡಿಗಳಲ್ಲದೆ ಪ್ರತ್ಯೇಕ ಪ್ರಾಂಶುಪಾಲರ ಕೊಠಡಿ, ಸಿಬ್ಬಂದಿ ಕೊಠಡಿಗಳಿಗೆ ವ್ಯವಸ್ಥೆ ಮಾಡತಕ್ಕದ್ದು.

6. ಕಾಲೇಜಿಗೆ ವ್ಯವಸ್ಥಿತವಾದ ಗ್ರಂಥಾಲಯ ಸೌಲಭ್ಯವನ್ನು ಒದಗಿಸತಕ್ಕದ್ದು ಮತ್ತು ಅರ್ಹ ಗ್ರಂಥಪಾಲಕರನ್ನು ನೇಮಕ ಮಾಡತಕ್ಕದ್ದು. ಕಾಲೇಜಿನ ಗ್ರಂಥಾಲಯದಲ್ಲಿ 60' x 40' ವಿಸ್ತೀರ್ಣದ ಓದುವ ಕೊಠಡಿ ಮತ್ತು 30' x 40' ವಿಸ್ತೀರ್ಣದ ದಾಸ್ತಾನು ಕೊಠಡಿಗಳಿರತಕ್ಕದ್ದು.

7. ಮಹಿಳಾ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಒದಗಿಸಿತಕ್ಕದ್ದು.

8. ಕರ್ನಾಟಕ ಸರಕಾರದ ವಿದ್ಯಾ ಇಲಾಖೆಯ ತಿದ್ದುಪಡಿ ನಿಯಮಾವಳಿಯಂತೆ ವಿದ್ಯಾಸಂಸ್ಥೆ ನೆಲೆಗೊಂಡಿರುವ ಕಟ್ಟಡದ ಮಹಡಿ ಮೆಟ್ಟಲುಗಳ ಅಗಲ ಕನಿಷ್ಠ 5 ಅಡಿ (1.50 ಮೀಟರ್)

ಇರಬೇಕು.  ಅಲ್ಲದೆ ಕಟ್ಟಡವು 2 ಮಹಡಿಗೆ ಮೀರಿದಲ್ಲಿ ಲಿಫ್ಟ್ ಸೌಕರ್ಯ ಒದಗಿಸತಕ್ಕದ್ದು ಹಾಗೂ ಹೊಸದಾಗಿ ಕಟ್ಟಡವನ್ನು ಕಟ್ಟುವ ಕಾಲೇಜುಗಳಿಗೆ  ಸಾಮಾನ್ಯ ಮಾನದಂಡದ ಮೇಲೆ ಮೆಟ್ಟಲುಗಳನ್ನು ನಿರ್ಮಾಣ ಮಾಡತಕ್ಕದ್ದು.

9. ಸೇರ್ಪಡೆಗೊಳಿಸಲಿರುವ ವಿದ್ಯಾರ್ಥಿ ಪರಿಮಿತಿಗನುಗುಣವಾಗಿ ಈ ಕೆಳಗಿನಂತೆ ತರಗತಿ ಕೊಠಡಿಗಳನ್ನು ವ್ಯವಸ್ಥಿತಗೊಳಿಸತಕ್ಕದ್ದು. ವಿದ್ಯಾರ್ಥಿ ಪರಿಮಿತಿ 100ರ ತನಕವಾದರೆ ತರಗತಿ ಕೊಠಡಿ ವಿಸ್ತೀರ್ಣ  25' x 45', ವಿದ್ಯಾರ್ಥಿ ಪರಿಮಿತಿ 80ರ ತನಕವಾದರೆ ತರಗತಿ ಕೊಠಡಿ ವಿಸ್ತೀರ್ಣ 25'x 40', ವಿದ್ಯಾರ್ಥಿ ಪರಿಮಿತಿ 50ರ ತನಕವಾದರೆ ತರಗತಿ ಕೊಠಡಿ ವಿಸ್ತೀರ್ಣ 25' x 35',  ವಿದ್ಯಾರ್ಥಿ ಪರಿಮಿತಿ 40ರ ತನಕವಾದರೆ ತರಗತಿ ಕೊಠಡಿ ವಿಸ್ತೀರ್ಣ 25' x 30' ರಂತೆ  ಇರತಕ್ಕದ್ದು.

10. ವಿದ್ಯಾ ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ವಿಶ್ವವಿದ್ಯಾನಿಲಯದ ಪ್ರತಿನಿಧಿಯನ್ನು ಕಡ್ಡಾಯವಾಗಿ ನೇಮಕಾತಿ ಮಾಡತಕ್ಕದ್ದು.

11. ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಅವಶ್ಯಕ ಕ್ರೀಡಾ ಸೌಲಭ್ಯಗಳನ್ನು ಒದಗಿಸತಕ್ಕದ್ದು. ಟೇಬಲ್ ಟೆನ್ನಿಸ್, ಚೆಸ್, ಜಿಮ್ನಾಸ್ಟಿಕ್ ಮುಂತಾದ ಒಳಾಂಗಣ ಕ್ರೀಡೆಗಳಿಗೆ ಮತ್ತು ಹೊರಾಂಗಣ ಕ್ರೀಡೆಗಳಿಗಾಗಿ ಕನಿಷ್ಠ ಪಕ್ಷ 200 ಮೀಟರ್ ಓಟದ ಮೈದಾನಕ್ಕೆ ಕಾಲೇಜಿನಲ್ಲಿ ಅವಕಾಶ ಕಲ್ಪಿಸತಕ್ಕದ್ದು. ನಗರ ಪ್ರದೇಶದಲ್ಲಿರುವ ಕಾಲೇಜುಗಳು ನಗರ ಪಾಲಿಕೆಗಳಿಂದ (City Corporation) ನಡೆಸಲ್ಪಡುವ ಮೈದಾನವನ್ನು ಕಾಲೇಜಿನ ಕ್ರೀಡಾ ಚಟುವಟಿಕೆಗಳಿಗೆ ಉಪಯೋಗಿಸಿಕೊಳ್ಳುವ ಬಗ್ಗೆ ಸಂಬಂಧಿತ ಪ್ರಾಧಿಕಾರಗಳ ಅಧಿಕಾರಿಗಳೊಂದಿಗಿನ ಕರಾರು ಪತ್ರವನ್ನು ಹೊಂದಿರತಕ್ಕದ್ದು.

ಸಹಿ/–
ಕುಲಸಚಿವರ ಪರವಾಗಿ